Geetha Shishu Shikshana Sangha (R)

SIMHA SUBBAMAHALAKSHMI FIRST GRADE COLLEGE

KRS ROAD, MYSURU-570 016

# ಯಶಸ್

**YASHAS** A SSFGC weekly newsletter

**Volume – 1** **Issue No. – 6** **6th July 2019**

## Counselling for professional courses - A report




Prenatal care was the reference made to Cost Accounting by Senior Prof PR Vishwanath in his Presidential address to the UG students gathered for "Counselling for professional Courses" on 5th July at the SSFGC campus.

CMA Ashok, Chairman, ICAI Mysore Chapter, spoke about the various career opportunities for Commerce students. Banking, Insurance, construction industry, Health care, Hospitality industry to name a few, have a need for accountants to look into the financial matters of their respective industries, he said.

In the PPT presentation on CMA course, information regarding the course was given; first part is the Foundation course, followed by Intermediate, thirdly, Finals where each course will have two groups of four subjects each.

Admissions to CMA can be through online or off line, along with the CMA course, 100 hrs. of computer training, free coaching on communication software etc. are being offered, it was told.



CMA carves careers for Project Analysts & Consultants, Tax Analysts, Valuers and others. They are the leaders in value creation and improve our knowledge in Cost and Works accounting.

The programme was coordinated by Sri R Ravi and Sri Nagabhushan Rao from the Mysore Chapter of ICAI, and presided over by Prof P R Vishwanath. The Director of the institution Dr. Prabhakara K V, and the Principal Smt. R.Gunavathi and other staff members were present.

Ms Varsha, II B.Com student welcomed the guests, and Assistant Professor Anil M, Dept of English rendered Vote of Thanks. Shantha, III B.Com student compered the program. About 75 students attend the program.

# ಆಧುನಿಕ ಜೀವನ ಶೈಲಿ ಮತ್ತು ಮನುಷ್ಯ

**(ವ್ಯಕ್ತಿತ್ವ ವಿಕಸನ ಬರೆಹ)**

**ಇಂ**ದಿನ ಮಾನವ ಹಿಂದಿನ ಮಾನವನಂತಲ್ಲ. ತನ್ನ ಮಿತಿ ಮೀರಿದ ಕಾಮನೆಗಳನ್ನು ಪೂರೈಸಿಕೊಳ್ಳಲು ತನ್ನೆಲ್ಲ ಭಾವನೆಗಳನ್ನು ಕೊಂದುಕೊಳ್ಳುತ್ತಿದ್ದಾನೆ. ಜೀವನದ ಪರಿಧಿಯನ್ನು ಕಟ್ಟಿಕೊಂಡು ನಾಗಾಲೋಟದಿಂದ ಮುನ್ನುಗ್ಗುತ್ತಿದ್ದಾನೆ. ಮುಂದೋಡುವ ಭರದಲ್ಲಿ ಪರಸ್ಪರ ಪ್ರೀತಿ, ಪ್ರೇಮ, ವಿಶ್ವಾಸ, ಶಾಂತಿ, ನೆಮ್ಮದಿ ಇತ್ಯಾದಿಗಳನ್ನು ಮರೆತಿದ್ದಾನೆ ಅಥವಾ ಮರೆತಂತೆ ಓಡುತ್ತಿದ್ದಾನೆ. ಇದೊಂದು ನಿಲ್ಲದ ಓಟ. ಈ ಓಟಕ್ಕೆ ಸೀಮಾರೇಖೆಯಿಲ್ಲ. ಓಡೋಡುತ್ತಲೇ ಜೀವನದ ಅಂತಿಮ ಗೆರೆಯ ಬಳಿ ಬಂದಿರುತ್ತಾನೆ. ತನ್ನ ಜೀವನವನ್ನು ಅವಲೋಕಿಸುವ ವ್ಯವಧಾನವಿಲ್ಲದೆ ಓಡೋಡಿ ಬಳಲುತ್ತಾನೆ. ಈ ಆಧುನಿಕ ಪ್ರಪಂಚದಲ್ಲಿ ವಸ್ತುಗಳಿಗಷ್ಟೇ ಬೆಲೆ, ಭಾವನೆಗಳಿಗೆ ಬೆಲೆಯಿಲ್ಲ. ಮನುಷ್ಯನಿಗೆ ಬೆಲೆಯಿಲ್ಲವೆಂಬ ಗಾಢವಾದ ನಂಬಿಕೆಗೊಳಗಾಗಿದ್ದಾನೆ. ಈವತ್ತಿನ ದಿನಮಾನದಲ್ಲಿ "ನೀನೇನು ಅನ್ನುವುದು ಮುಖ್ಯವಲ್ಲ, ನಿನ್ನ ಬಳಿ ಏನೇನಿದೆ ಎನ್ನುವುದಷ್ಟೇ ಮುಖ್ಯವಾಗಿದೆ". ಏನೇನಿದೆ ಎಂದರೆ ಭೌತಿಕ ವಸ್ತುಗಳು, ಮನೆ, ಕಾರು, ಹಣ, ಬಂಗಾರ ಇತ್ಯಾದಿ ಕಣ್ಣಿಗೆ ಕಾಣುವ ವಸ್ತುಗಳು. ಇವೇ ಮುಖ್ಯವಾಗುತ್ತವೆ. ಇಷ್ಟೆಲ್ಲ ಭೌತಿಕ ವಸ್ತುಗಳನ್ನು ಹೇಗೆ ಗಳಸಿಕೊಂಡ ಎಂದು ಯಾರೂ ಯೋಚಿಸುವುದಿಲ್ಲ. ಯೋಚಿಸುವಷ್ಟು ಸಮಯವೂ ಇಲ್ಲ. ವಸ್ತುಗಳನ್ನು ಅದರಲ್ಲೂ ಭೋಗವಸ್ತುಗಳನ್ನು ಹೊಂದುವುದರಲ್ಲೇ ನಮ್ಮಿಡೀ ಜೀವನ ಕಳೆದುಹೋಗಿ ಬಿಡುತ್ತದೆ. ಅಂದರೆ, ಮನುಷ್ಯನ ಭಾವನೆಗಳಿಗೆ, ಗುಣಗಳಿಗೆ, ಅವನಲ್ಲಿರುವ ಕರುಣೆ, ಅನುಕಂಪ, ದಯೆ, ಪ್ರೀತಿ ಇತ್ಯಾದಿಗಳು ನಗಣ್ಯವಾಗಿಬಿಡುತ್ತವೆ. ಮಾನವೀಯ ಮೌಲ್ಯಗಳಿಗೆ ಬೆಲೆ ಕಟ್ಟಬೇಕು ವಿನಃ ಭೌತಿಕ ವಸ್ತುಗಳಿಗಲ್ಲ.

ಮನುಷ್ಯ ತನ್ನೆಲ್ಲ ಬೇಕುಗಳನ್ನು ಪೂರೈಸಿಕೊಳ್ಳಲು ಏನನ್ನೂ ಲೆಕ್ಕಿಸದೆ ತನ್ನ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಲೆಕ್ಕಿಸದೆ ಅನೇಕ ರೋಗ ರುಜಿನಗಳಿಗೆ ತುತ್ತಾಗುತ್ತಾನೆ. ಇಳಿವಯಸ್ಸಿನಲ್ಲಿ ಕಾಣಿಸಿಕೊಳ್ಳಬೇಕಾದ ಕಾಯಿಲೆಗಳು ಅಪ್ರಾಪ್ತ ವಯಸ್ಸಿಗೇ ಕಾಣಿಸಿಕೊಳ್ಳಲಾರಂಭಿಸುತ್ತವೆ. ಈ ಎಲ್ಲಾ ಕಾರಣಗಳಿಗೆ ಇಂದಿನ ಮನುಷ್ಯನ ಜೀವನ ಶೈಲಿ ಅಥವಾ ವಿಧಾನವೇ ಪ್ರಮುಖ ಕಾರಣ. ನಮ್ಮ ಶರೀರವನ್ನು ನಾವೇ ಗೌರವಿಸದಿದ್ದರೆ ಯಾರಾದರೂ ಏಕೆ ಗೌರವಿಸಬೇಕು? ಆರೋಗ್ಯವನ್ನು ಕಡೆಗಣಿಸಿದರೆ ಖಂಡಿತ ಅದು ನಮ್ಮನ್ನು ಕಡೆಗಣಿಸುತ್ತದೆ. ಮನುಷ್ಯ ದೀರ್ಘಕಾಲ ನೆಮ್ಮದಿಯಿಂದ ಬದುಕಬೇಕಾದರೆ ತನ್ನ ಶಾರೀರಿಕ ಮತ್ತು ಮಾನಸಿಕ ಆರೋಗ್ಯದ ಕಡೆ ಗಮನಕೊಡುವುದು ಅತ್ಯವಶ್ಯಕ. ಎಷ್ಟು ವರ್ಷ ಬದುಕಿದ ಎನ್ನುವುದಕ್ಕಿಂತ ಹೇಗೆ ಬದುಕಿದ ಎನ್ನುವುದು ಮುಖ್ಯವಲ್ಲವೆ? ಸರಿಯಾಗಿ ಬದುಕಬೇಕು ಎಂದರೆ ಸರಿಯಾದ ರೀತಿಯಲ್ಲಿ ಜೀವನ ಕ್ರಮವನ್ನು ರೂಪಿಸಿಕೊಳ್ಳಬೇಕು.

ಇಂದಿನ ಮನಷ್ಯ ಎಲ್ಲವನ್ನು ತನ್ನಿಚ್ಛೆಗನುಗುಣವಾಗಿ ಬದಲಿಸಿಕೊಂಡಿದ್ದಾನೆ. ದಿನೇ ದಿನೇ ತನ್ನನ್ನು ತಾನು ಬದಲಾವಣೆಗೊಳಪಡಿಸಿಕೊಳ್ಳುತ್ತಿದ್ದಾನೆ. 'ಪರಿವರ್ತನೆಯೇ ಜೀವನವಲ್ಲವೆ'

ಎಂದುಕೊಂಡು ಕೆಟ್ಟ ರೀತಿಯ ಬದಲಾವಣೆಯನ್ನು ತಂದುಕೊಳ್ಳುತ್ತಿದ್ದಾನೆ. ಪರಿವರ್ತನೆಯೇ ಜೀವನ ನಿಜ, ಆದರೆ ಪರಿವರರ್ತನೆ ಒಳ್ಳೆಯ ದಿಕ್ಕಿನಲ್ಲಾಗಬೇಕು. ಸಮಾಜಮುಖಿಯಾಗಬೇಕು. ಆದರಿಂದು 'ಹೇಗಾದರೂ ಸರಿ ಓಡು, ಓಡದಿದ್ದರೆ ನಾಶವಾಗುತ್ತೀಯೆ' ಎನ್ನುವ ಧೋರಣೆ ಮನುಷ್ಯನದ್ದು. 'Hurry up or be run over' ಎಂಬುದು ಇಂದಿನ ಯುಗದ ಘೋಷಣಾ ವಾಕ್ಯ.

ಎಲ್ಲೋ ಅಪರೂಪಕ್ಕೆಂಬಂತೆ ಕೆಲವರು ತನ್ನ ಹಿಂದಿನವರ ಹಾಗೆ ಜೀವನ ಶೈಲಿಯನ್ನು ರೂಪಿಸಿಕೊಳ್ಳಲು ಪ್ರಯತ್ನಪಡುತ್ತಿದ್ದಾರೆ. ಆದರೆ ವೇಗದಲ್ಲಿ ಓಡುವವರ ಮುಂದೆ ಇವರು ಹೆಳವರಂತೆ ಕಾಣುತ್ತಾರೆ. ಅಥವಾ ಈ ಕಾಲಕ್ಕೆ ಒಗ್ಗದವರಂತೆ ಕಾಣುತ್ತಾರೆ, ಬೇರೆಯವರ ನಗೆಪಾಟಲಿಗೀಡಾಗುತ್ತಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಮುಂದುವರೆದಂತೆ ಮನುಷ್ಯ ಕೂಡ ಭಾವಶೂನ್ಯ ಯಂತ್ರವಾಗುತ್ತಿದ್ದಾನೆ. ಅವನ ಬದುಕು ಕೂಡ ಯಾಂತ್ರಿಕ, ಸೋತ ಮುಖ, ಸತ್ತ ಭಾವನೆಗಳು, ಕಣ್ಣುಮುಂದೆ ಕಾಣುವುದೊಂದೇ ನೋಟ – 'ಭೋಗವಸ್ತುಗಳು'. ಎಷ್ಟರಮಟ್ಟಿಗೆ ಎಂದರೆ, ಎಲ್ಲ ಭೋಗವಸ್ತುಗಳನ್ನು ಖರೀದಿಸಿದ್ದಾನೆ. ಆದರೆ ಅವುಗಳನ್ನು ಅನುಭವಿಸುವ ಯೋಗವಿಲ್ಲ, ಅಂದರೆ ಸಮಯವಿಲ್ಲ. ಇಂದು ಸಮಯ ಎಂದರೆ ಹಣ, ಗಂಟೆಗಿಷ್ಟು ಎಂದು ಲೆಕ್ಕ ಹಾಕುವ ಕಾಲ ಇದು. ಹೀಗಾಗಿ ಪ್ರತಿಘಳಿಗೆಯೂ ಅತ್ಯಂತ ಧನಾತ್ಮಕವಾಗಿ ಕಾಣತೊಗುತ್ತದೆ. ಗಾಣಕ್ಕೆ ಕಟ್ಟಿದ ಎತ್ತಿನಂತೆ ದುಡಿಯುತ್ತಿದ್ದಾನೆ. ಅವನ ದುಡಿತ ಜೀವನದ ಎಲ್ಲ ಸುಖ ಭೋಗಗಳನ್ನು ನುಂಗಿ ಹಾಕಿ ಆಪೋಶನ ತೆಗೆದುಕೊಂಡುಬಿಟ್ಟಿದೆ.

ಈ ರೀತಿಯ ಯಾಂತ್ರಿಕ ಬದುಕು ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲವೆ? ಆಧುನಿಕ ಜೀವನ ಶೈಲಿಯನ್ನು ತನ್ನದಾಗಿಸಿಕೊಂಡಿರುವ ಮನುಷ್ಯನ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತವೆಂದರೆ– ಮನಷ್ಯ ಚಟಗಳಿಗೆ ಬಲಿಯಾಗುತ್ತಿದ್ದಾನೆ, ಅನಾರೋಗ್ಯದ ಆಹಾರಗಳ ದಾಸನಾಗುತ್ತಿದ್ದಾನೆ. ನಿದ್ರಾಹೀನತೆಗೆ ಒಳಗಾಗುತ್ತಿದ್ದಾನೆ, ದಿನನಿತ್ಯದ ಕನಿಷ್ಠ ವ್ಯಾಯಾಮಕ್ಕೂ ಕೂಡ ಸಮಯವಿರುವುದಿಲ್ಲ, ಬದುಕಿನ ಗುಣಮಟ್ಟ ತೀರ ಕೆಳಮಟ್ಟದ್ದಾಗಿರುತ್ತದೆ, ಸ್ಥೂಲಕಾಯನಾಗುತ್ತಿದ್ದಾನೆ, ಹೀಗಾಗಿ ಶರೀರ ರೋಗಗಳ ತವರೂರಾಗುತ್ತಿದೆ. ಅನೇಕ ರೀತಿಯ ಆರೋಗ್ಯದ ಸಮಸ್ಯೆಗಳು ತಲೆದೋರುತ್ತಿವೆ. ಖಿನ್ನತೆಗೆ ಒಳಗಾಗುತ್ತಿದ್ದಾನೆ.

*(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)*

***–ಪ್ರೊ. ಜಿ. ಚಂದ್ರಶೇಖರ್***
***ಸಂದರ್ಶಕ ಪ್ರಾಧ್ಯಾಪಕರು, ಹಿಂದಿ ವಿಭಾಗ***
***ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜು, ಮೈಸೂರು***




## To Gather - ಸ್ಮರಣೆ

# ಪತ್ರಿಕಾ ದಿನಾಚರಣೆ




1 ಜುಲೈ 2019 ರಂದು ದೈನಂದಿನ ಟು ಗ್ಯಾದರ್‌ನಲ್ಲಿ ಪತ್ರಿಕಾ ದಿನವನ್ನು ಆಚರಿಸಲಾಯಿತು. ಕರ್ನಾಟದಲ್ಲಿ ಕನ್ನಡದ ಮೊಟ್ಟಮೊದಲ ಪತ್ರಿಕೆ, 'ಮಂಗಳೂರು ಸಮಾಚಾರ' ಜುಲೈ 1, 1843ರಲ್ಲಿ ರೆವೆರೆಂಡ್ ಡಾ. ಹರ್ಮನ್ ಮೊಗ್ಲಿಂಗ್ ಇವರ ಸಂಪಾದಕತ್ವದಲ್ಲಿ ಆರಂಭಗೊಂಡಿತು. ಈ ದಿನದ ನೆನಪಿಗೆ ಕರ್ನಾಟಕದಲ್ಲಿ ಜುಲೈ1 ರಂದು ಪತ್ರಿಕಾ ದಿನವನ್ನಾಗಿ ಆಚರಿಸಲಾಗುತ್ತಿದೆ. 1982 ರಲ್ಲಿ ಅಸ್ತಿತ್ವಕ್ಕೆ ಬಂದ ಮಾಧ್ಯಮ ಅಕಾಡೆಮಿ ಪತ್ರಿಕಾ ದಿನಾಚರಣೆಯ ಮುಂದಾಳತ್ವವನ್ನು ವಹಿಸುತ್ತಿದೆ. 1996 ರಿಂದ ಪ್ರತಿವರ್ಷ ಈ ಆಚರಣೆ ನಡೆಯುತ್ತಿರುವುದು ಗಮನಾರ್ಹ ಸಂಗತಿ.

# ವಿಶ್ವ ವೈದ್ಯರ ದಿನ




01 ಜುಲೈ 2019 ರಂದು ದೈನಂದಿನ ಟು ಗ್ಯಾದರ್ ನಲ್ಲಿ ವಿಶ್ವ ವೈದ್ಯರ ದಿನವನ್ನು ಆಚರಿಸಲಾಯಿತು. ವಿಶ್ವ ವೈದ್ಯರ ದಿನವು ವೈಯಕ್ತಿಕ ಜೀವನ ಮತ್ತು ಸಮುದಾಯಗಳಿಗೆ ವೈದ್ಯರ ಕೊಡುಗೆಗಳನ್ನು ಗುರುತಿಸಲು ಬಳಸಲಾಗುತ್ತದೆ. ಮೊದಲ ವೈದ್ಯರ ದಿನವನ್ನು ವೈಂಡರ್‌ನಲ್ಲಿ ಮಾರ್ಚ್ ೩೦, ೧೯೩೩ ರಂದು ಆಚರಿಸಲಾಗಿತ್ತು. ಭಾರತದಲ್ಲಿ ಪ್ರಸಿದ್ಧ ವೈದ್ಯ ಮತ್ತು ಪಶ್ಚಿಮ ಬಂಗಾಳದ ಎರಡನೇ ಮುಖ್ಯಮಂತ್ರಿ ಡಾ. ಬಿದಾನ್ ಚಂದ್ರ ರಾಯ್ ಅವರ ಗೌರವಾರ್ಥ ವೈದ್ಯರ ದಿನವನ್ನು ಜುಲೈ ೧ ರಂದು ಆಚರಿಸಲಾಗುತ್ತದೆ. ಬೇರೆ ದೇಶಗಳಲ್ಲಿ ಬೇರೆ ಬೇರೆ ವ್ಯಕ್ತಿಗಳ ಸ್ಮರಣಾರ್ಥ ಬೇರೆ ಬೇರೆ ದಿನಗಳಲ್ಲಿ ವೈದ್ಯರ ದಿನವನ್ನು ಆಚರಿಸಲಾಗುತ್ತದೆ. ಈ ಆಚರಣೆಯು ನಮ್ಮ ಜೀವನದಲ್ಲಿ ವೈದ್ಯರು ನಮಗೆಷ್ಟು ಮುಖ್ಯ ಮತ್ತು ನಮ್ಮ ರೋಗಗಳನ್ನು ಗುಣಪಡಿಸುವ ಅವರ ಚಿಕಿತ್ಸೆಗಳು ಎಷ್ಟು ಅಮೂಲ್ಯವೆಂದು ತೋರಿಸುವ ಅಗತ್ಯವನ್ನು ತಿಳಿಸುತ್ತದೆ.

# ವಚನ ಪಿತಾಮಹ ಶ್ರೀ ಫ.ಗು.ಹಳಕಟ್ಟಿಯವರ ಜನ್ಮದಿನ



2 ಜುಲೈ 2019 ರಂದು ದೈನಂದಿನ ಟು ಗ್ಯಾದರ್ ನಲ್ಲಿ ವಚನ ಪಿತಾಮಹರೆಂದ ಚಿರಪರಿಚತರಾದ ಶ್ರೀ ಫ.ಗು. ಹಳಕಟ್ಟಿಯವರ ಸಾಹಿತ್ಯ ಸಾಧನೆ ಮತ್ತು ತ್ಯಾಗದ ಬದುಕನ್ನು ನೆನಪು ಮಾಡಿಕೊಳ್ಳಲಾಯಿತು. ಫ.ಗು.ಹಳಕಟ್ಟಿಯವರು 2 ಜುಲೈ 1880ರಂದು ಧಾರವಾಡದಲ್ಲಿ ಜನಿಸಿದರು. ತಂದೆ ಗುರುಬಸಪ್ಪ ಹಳಕಟ್ಟಿ ತಾಯಿ ದಾನಾದೇವಿ, ಹಳಕಟ್ಟಿ ಎಂಬುದು ಇವರ ಮನೆತನದ ಹೆಸರು. ಕನ್ನಡಕ್ಕೆ ಶ್ರೀಯುತರ ಕೊಡುಗೆ ಅಪಾರವಾಗಿದೆ. ವಿಶೇಷವಾಗಿ ವಚನ ಸಾಹಿತ್ಯವನ್ನು ಗುರುತಿಸಿ, ಅವುಗಳನ್ನು ವ್ಯವಸ್ಥಿತವಾಗಿ ಪ್ರಕಟಿಸಿದ ಕಾರಣಕ್ಕೆ ಅವರನ್ನು ವಚನ ಪಿತಾಮಹ ಎಂದು ಕರೆಯುತ್ತಾರೆ.

# ಡಾ. ಎಂ. ಬಾಲಮುರುಳಿಕೃಷ್ಣ ಅವರ ಜನ್ಮದಿನ



2 ಜುಲೈ 2019 ರಂದು ದೈನಂದಿನ ಟು ಗ್ಯಾದರ್ ನಲ್ಲಿ ಕರ್ನಾಟಕ ಸಂಗೀತದ ದಿಗ್ಗಜರಲ್ಲಿ ಹಿರಿಯವರಾದ ಡಾ. ಎಂ. ಬಾಲಮುರುಳಿ ಕೃಷ್ಣ ಅವರ ಸಾಧನೆಯನ್ನು ಅವರ ಹುಟ್ಟಿದ ದಿನದ ಹಿನ್ನೆಲೆಯಲ್ಲಿ ಅವರನ್ನು ಸ್ಮರಿಸಿಕೊಳ್ಳಲಾಯಿತು. ಡಾ.ಮಂಗಳಂಪಲ್ಲಿ ಬಾಲಮುರಳಿ ಕೃಷ್ಣ ಕರ್ನಾಟಕ ಶೈಲಿಯ ಸಂಗೀತಗಾರರಲ್ಲಿ ಅದ್ವಿತೀಯರು. ವಾಗ್ಗೇಯಕಾರರಾಗಿಯೂ ಅವರು ಹಲವಾರು ಕೃತಿ ರಚನೆ ಮಾಡಿದ್ದಾರೆ. ತೆಲುಗು, ತಮಿಳು, ಕನ್ನಡವಲ್ಲದೆ ಹಲವಾರು ಭಾಷೆಗಳಲ್ಲಿ ಅವರು ಸಂಗೀತ ಕಚೇರಿಗಳನ್ನು ಕೊಟ್ಟಿದ್ದಾರೆ. ಅವರು ನಡೆಸಿದ ಸಂಗೀತ ಕಛೇರಿಗಳು ಅಂದಾಜು ೧೮,೦೦೦. ೨೫೦ ಕ್ಕಿಂತಲೂ ಹೆಚ್ಚು ಧ್ವನಿಸುರುಳಿಗಳನ್ನು ಅವರು ಬಿಡುಗಡೆ ಮಾಡಿದ್ದಾರೆ.

## ಬೋಧಕ ಸಿಬ್ಬಂದಿಗಳೊಂದಿಗೆ ನಿರ್ದೇಶಕರ ಸಭೆ



03 ಜುಲೈ 2019 ರಂದು ಬೋಧಕ ಸಿಬ್ಬಂದಿಗಳೊಂದಿಗೆ ಕಾಲೇಜಿನ ನಿರ್ದೇಶಕರಾದ ಡಾ. ಪ್ರಭಾಕರ. ಕೆ. ವಿ ಅವರು ಸಭೆಯನ್ನು ನಡೆಸಿದರು. ಸಭೆಯಲ್ಲಿ ಜೂನ್ ತಿಂಗಳ ಕಾರ್ಯವರದಿಯನ್ನು ಪ್ರಾಂಶುಪಾಲರಿಂದ ಪಡೆದುಕೊಂಡು ಶೈಕ್ಷಣಿಕವಾಗಿ ಅಗತ್ಯವಾದ ಮಹತ್ವದ ಸಲಹೆ ಸೂಚನೆಗಳನ್ನು ನೀಡಿದರು.

## Visitors to College




Sri Mahadev Prasad placement officer GSSSIETW visited the campus on 3rd July 2019. He had an interaction with the final year B.Com students. He spoke about the basics requirements that the hiring companies look for in the students. He asked the students to set a clear and specific goal in life.



5 ಜುಲೈ 2019 ರಂದು ಜಿಎಸ್ಎಸ್ಎಸ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಿವಕುಮಾರ್ ಅವರು ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ನಿರ್ದೇಶಕರು, ಪ್ರಾಂಶುಪಾಲರು, ಬೋಧಕ ಸಿಬ್ಬಂದಿಗಳು ಮತ್ತು ಬೋಧಕೇತರ ಸಿಬ್ಬಂದಿಗಳೊಂದಿಗೆ ಚರ್ಚೆ ನಡೆಸಿದರು.

4 ಜುಲೈ 2019 ರಂದು ಕಾಲೇಜಿಗೆ ವಿದ್ವತ್ ಕಂಪನಿಯ ಅಧಿಕಾರಿಗಳಾದ ಶ್ರೀ ಜೋಷ್ ಮತ್ತು ಶ್ರೇಯಾ ಅವರು ಭೇಟಿ ನೀಡಿದ್ದರು.



## ರಾಷ್ಟ್ರೀಯ ಸೇವಾ ಯೋಜನೆಯಿಂದ ಶ್ರಮದಾನ


6 ಜುಲೈ 2019 ರ ಶನಿವಾರ ಮಧ್ಯಾಹ್ನ 12.30 ರಿಂದ ೧.೩೦ ರವರೆಗೆ ರಾಷ್ಟ್ರೀಯ ಸೇವಾ




ಯೋಜನೆಯ ಸ್ವಯಂಸೇವಕ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಕಾಲೇಜಿನ ಆವರಣ ಮತ್ತು ಕಾಲೇಜಿನ ಸುತ್ತ ಸ್ವಚ್ಛತಾ ಕಾರ್ಯಕ್ರಮವನ್ನು ದೈನಂದಿನ ಕಾರ್ಯಕ್ರಮದ ಭಾಗವಾಗಿ ನಡೆಸಿಕೊಟ್ಟರು. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಧಿಕಾರಿಗಳಾದ ಕು. ಪ್ರಿಯಾಂಕ ಎಂ.ಎನ್ ಅವರು ಇದನ್ನು ನಿರ್ವಹಿಸಿದರು. ಕಾಲೇಜಿನ ವಿಭಾಗದ ಪ್ರಾಧ್ಯಾಪಕರೆಲ್ಲರು ಇದರಲ್ಲಿ ಪಾಲ್ಗೊಂಡಿದ್ದರು.

# ಚಿತ್ರಕಲಾವಿದೆ ಕು. ಅಂಜು ಚೌದರಿ






ಪ್ರಥಮ ಬಿ,ಬಿ.ಎ ವಿದ್ಯಾರ್ಥಿನಿ ಕು. ಅಂಜು ಚೌದರಿ ಅವರ ಚಿತ್ರಗಳಿವು. ತುಮಕೂರಿನವರಾದ ಇವರು ಶ್ರೀಯುತ ನರೇಶ್ ಚೌದರಿ ಮತ್ತು ಇಂದಿರಾ ಚೌದರಿ ದಂಪತಿಗಳ ಮಗಳು. ಬಾಲ್ಯದಿಂದಲೂ



ಚಿತ್ರಕಲೆಯಲ್ಲಿ ಆಸಕ್ತಿಯನ್ನು ಹೊಂದಿರುವ ಇವರು, ವಿವಿಧ ಮಾದರಿ ಚಿತ್ರಗಳನ್ನು ರಚಿಸುತ್ತಿದ್ದಾರೆ. ಕಪ್ಪು ಬಿಳುಪು ಬಣ್ಣಗಳ ಚಿತ್ರಗಳನ್ನು ಹೆಚ್ಚಾಗಿ ರಚಿಸಿರುವ ಇವರು ತಮ್ಮದೆ ಆದ ಸುಂದರ ಮುಗ್ಧ ಕಲ್ಪನೆಗಳನ್ನು ಚಿತ್ರದಲ್ಲಿ ಮೂಡಿಸುತ್ತಿದ್ದಾರೆ. ಚಿತ್ರಗಳನ್ನು ಕೇವಲ ಕುಂಚಗಳಿಂದ ರಚಿಸುವುದಷ್ಟೇ ಅಲ್ಲ, ಬಣ್ಣ ಬಣ್ಣದ ಕಾಗದಗಳನ್ನು ಸುಂದರ ಆಕೃತಿಗಳಾಗಿ ಕತ್ತರಿಸಿ ಚಿತ್ರಗಳನ್ನು



ಮೂಡಿಸುವ ಕಲೆಯನ್ನು ಕಲಿತ್ತಿದ್ದಾರೆ. ಬಲಭಾಗದಲ್ಲಿರುವ ಚಿತ್ರ ಅವರ ಮತ್ತೊಂದು ಸುಂದರ ಚಿತ್ರಾಕೃತಿ. ಬಹುತೇಕ ಕಲಾವಿದರು ಮಾನವ ಸೂರ್ಯಾಸ್ತವನ್ನು ನೋಡುವುದನ್ನು ಚಿತ್ರಿಸಿದರೆ, ಇವರು ತಾಯಿ ಹಕ್ಕಿ ಮತ್ತು ಅದರ ಮರಿ ಹಕ್ಕಿ ಸೂರ್ಯಾಸ್ತವನ್ನು ಜೊತೆಯಲ್ಲಿ ಕುಳಿತು ನೋಡುತ್ತಿರುವ ಕಾಲ್ಪನಿಕ ಚಿತ್ರದವನ್ನು ಮೂಡಿಸಿದ್ದಾರೆ. ಅವರ ಕಲಾ ಆಸಕ್ತಿ ಮತ್ತು ಪ್ರಯತ್ನಕ್ಕೆ ಅಭಿನಂದನೆಗಳು. ಅವರ ಕಲಾಸಕ್ತಿ ಹೀಗೆಯೇ ಮುಂದುವರಿಯಲಿ ಎಂದು ಹಾರೈಸುತ್ತೇವೆ.

**India of My Dreams - M. K. Gandhi**

*India is essentially karmabhumi (land of duty) in contradistinction to bhogabhumi (land of enjoyment).*

*-Young India, 5-2'-25*

## Photo Corner



**ವರದಿಗಾರರು**
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ

**ಛಾಯಾಚಿತ್ರ ಕೃಪೆ**
ಡಾ. ಪ್ರಭಾಕರ ಕೆ. ವಿ. ನಿರ್ದೇಶಕರು
ಡಾ. ಬಿ. ಎಸ್. ಸುದೀಪ್, ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಅನಿಲ್. ಎಂ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಕು. ಪ್ರಿಯಾಂಕ. ಎಂ. ಎನ್, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ